ಹೌದು! ನಿಧಾನ ಮೇಲೆದ್ದ ಆತ ಆ ಮಗುವಿನ ಕೆನ್ನೆಯನ್ನು, ಅದು ಆಕೆಯ ಅಮ್ಮನ ಕೆನ್ನೆಯೇನೋ ಎನ್ನುವಷ್ಟು ನಯವಾಗಿ ಸವರುತ್ತಾನೆ. ಆಗ ಮಗು ಕೇಳುತ್ತದೆ – ಮಾಮಾ – ದೂರ ಹೋಗಿರುವ ಅಮ್ಮ ಯಾವಾಗ ವಾಪಸ್ಸು ಬರುತ್ತಾಳೆ? ಕಥಾನಾಯಕನ ಕೆನ್ನೆ ಜಾರಿದ ಹನಿಗಳು ಮಗುವಿನ ಹಣೆಯಲ್ಲಿ ಮುತ್ತಿನ ಹಾಗೆ ನಿಲ್ಲುತ್ತವೆ!...

ನನ್ನದೆಂಥ ಭಾವೋತ್ಕಟೆಯ ಅತಿರೇಕ ಚೈತ್ರ? ನಾ ಬರೆದ ಆ ಕಥೆಯ ಕೊನೆಯ ಸಾಲನ್ನು ನಾನೇ ಅದೆಷ್ಟೋ ಸಲ ಓದಿ ಅತ್ತಿದ್ದೇನೆ. ಜೀವಾ ಎಂದು ಬಡಬಡಿಸಿದ್ದೇನೆ. ಯಾರದೋ ಮೌಢ್ಯಕ್ಕೆ ಬಲಿಯಾದ, ಇಷ್ಟವಿಲ್ಲದವನೊಂದಿಗೆ ಬದುಕಿದ ದೇವಿ ಕಡೆಗೂ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಜೀವಾ ಅವಳ ಜೀವದ ಕುಡಿ. ಆಕೆಯೂ ಅಮ್ಮನನ್ನು ಬದುಕಿಸಲಾಗವುದಿಲ್ಲ. ಆದರೆ ಜಗತ್ತಿಗೇ ಗೊತ್ತಿಲ್ಲದ ಗುಟ್ಟೊಂದನ್ನು ದೇವಿ ತನ್ನೊಂದಿಗೆ 'ಒಯ್ದು'ಬಿಟ್ಟಿದ್ದಾಳೆ. 'ಜೀವಾ' ಆಕೆಯ ಮೊದಲ ಪ್ರಿಯಕರನ ಪ್ರೀತಿಯ ಕಾಣಿಕೆ! ಈ ಒಗಟು ದೇವಿ, ಕಥಾನಾಯಕ ಹಾಗೂ ಕಥೆಗಾರ್ತಿಗೆ ಮಾತ್ರ ಗೊತ್ತು! ಇದನ್ನು ಯಾರಿಗೂ ಹೇಳದಿರು ಚೈತ್ರ, ಯಾಕೆಂದರೆ ಇಂದಿಗೂ ನಾ ಹುಟ್ಟಿ ಬೆಳೆದ ಹಳ್ಳಿಯಲ್ಲಿ 'ಜೀವಾ', ಆಕೆಯ ಸೆರೆಯ ವ್ಯಸನಿ ತಂದೆ ಬದುಕಿದ್ದಾರೆ! ದೇವಿ, ನನ್ನ ಕಥಾನಾಯಕರ ಪ್ರೀತಿಯ ಉತ್ಕಟತೆ ಅರಿತವರಿಗೆ ಇದೊಂದು ಆಘಾತವಾಗಲಾರದು. ದೇವಿಯಂಥ ತೀವ್ರ ವ್ಯಾಮೋಹವಿಲ್ಲದಿದ್ದರೆ ಯಾಕಾದರೂ ಬದುಕಿರಬೇಕು ನೀನೇ ಹೇಳು! ಅದೇ, ಅದೇ ವ್ಯಾಮೋಹ. ತನ್ಮಯತೆ. ಉನ್ಮಾದ ಎಲ್ಲದರಲ್ಲಿಯೂ ನಾನು ಬಯಸಿದ್ದು.

ಅಂಥದ್ದೇ ಒಂದು ತನ್ಮಯ ರಾತ್ರಿ: ಸ್ವರವನ್ನು ನುಡಿಸಿ, ನುಡಿಸಿ ಮತ್ತೇರಿ ಅದಕ್ಕೇ ಒರಗಿ ಮಲಗಿಬಿಟ್ಟಿದ್ದೆ. ಯಾರದೋ ಮೆಲ್ಲಧ್ವನಿ ಎಚ್ಚರಿಸಿತು. ಕಣ್ಬಿಟ್ಟು ನೋಡಿದಾಗ ಮಂಜಾಗಿ ಕಂಡದ್ದು – ನನ್ನನ್ನೇ ದಿಟ್ಟಿಸುತ್ತಿದ್ದ ಅಪ್ಪಅಮ್ಮ. ನಾನು ಅರೆನಿದ್ದೆಯಲ್ಲಿದ್ದು ಅವರ ಬಳಿ ಹೋದೆ. ಯಾಕೆ ಮಗೂ. ಇಲ್ಲೇ ನಿದ್ದೆ ಮಾಡಿಬಿಟ್ಟೆ ಒಳಗೆ ಹೋಗಿ ಮಲಗು. ಬಯಲಿನ ಸುಡುಗಾಳಿ ಮೈಗೊಳ್ಳೆಯದಲ್ಲ ಎಂದರು. ಅಪ್ಪ, ಬೇರೆ ಏನೋ ಹೇಳಲು ಬಂದಿದ್ದರೂ ಅವರ ಮಾತು ಬದಲಿಸಿದ್ದರೆನ್ನುವುದು ಗೊತ್ತಾಯಿತು. ನಿದ್ದೆಯ ಮತ್ತಿನಲ್ಲಿದ್ದ ನಾನೂ ಕೇಳದೆ ಉಪ್ಪರಿಗೆ ಇಳಿದು ಮಲಗುವ ಕೋಣೆಗೆ ಹೋದೆ. ಹೋಗುವ ಮೊದಲು ಮತ್ತೊಮ್ಮೆ ಅಪ್ಪನನ್ನು 'ಸ್ವರ'ವನ್ನು ನೋಡಿದೆ. ಆ ರಾತ್ರಿಯ ನಿದ್ದೆಯಲ್ಲೂ ಯಾಕೋ ವೀಣೆ ಚೂರಾದಂತೆ, ಅಪ್ಪ ಸತ್ತುಹೋದಂತೆ ಕ್ರೂರ ಕನಸುಗಳು. ಅದೆಷ್ಟು ಸಲ ಬೆಚ್ಚಿ ಬೆಚ್ಚಿ ಎದ್ದೆನೋ ಗೊತ್ತಿಲ್ಲ.

ಚೈತ್ರ, ಕ್ರೂರ ಕನಸುಗಳು ನಿಜವಾಗುತ್ತವೆಂದು ಮುದುಕರು ಹೇಳಿದರೆ ನಾನು ಸಗಟಾಗಿ ತಿರಸ್ಕರಿಸಿಬಿಡುತ್ತಿದ್ದೆ. ಅಪ್ಪನ ಹಾಗೆ ನಾನೂ ನಂಬುತ್ತಿದ್ದೆ, ಮೂಢತೆಯನ್ನಲ್ಲ, ವಾಸ್ತವವನ್ನು. ಆದರೆ – ಅಂದಿನಿಂದಲೇ ನನ್ನ ಬದುಕಿನಲ್ಲಿ ಬಿರುಗಾಳಿ ಪ್ರಾರಂಭವಾಯಿತು. ಆಸರೆಗಾಗಿ ಹಿಡಿದ ಎಲ್ಲವೂ ಮುರಿಮುರಿದು ಬಿದ್ದವು. ಹೆಣ್ಣಾಗುವುದೆಂದರೆ ಎಂಥ ಭಯಾನಕ ಹಿಂಸೆ...

★★★

ಸುನಯನ ಮುಖ ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದಳು. ಚೈತ್ರ ತುಸುದೂರ ಕೂತು ಆಕೆಯ ಮಾತು ಕೇಳುತ್ತಿದ್ದವನು ಹತ್ತಿರ ಸರಿದು ಆಕೆಯನ್ನು ಸಮಾಧಾನ ಮಾಡತೊಡಗಿದ. ಅವರು ಕುಳಿತ ಗುಡ್ಡದ ತುದಿಯಿಂದ ಊರು – ಊರಿನ ಮನೆಗಳು ಮಕ್ಕಳ ಆಟಿಕೆಗಳಾಗಿ ಕಾಣಿಸಿದವು. ಸೂರ್ಯಾಸ್ತದ ಕುಂಕುಮ ಕೆಂಪು ಎಲ್ಲೆಡೆ ಚೆಲ್ಲಿತ್ತು. ಸುಂಯೋ ಗಾಳಿ ಬಂದಾಗ ಸುನಯನಳ ಮೃದುಗೂದಲು ಮುಖ ಮುಚ್ಚಿ ಹೊದ್ದಿಕೆಯಾದವು. ಆಗೆಲ್ಲ – ಮೋಡ